ಅಸಲು ದಾವೆ ಸಂಖ್ಯೆ- 303/2019
ಪಿಡಬ್ಲ್ಯೂ- 01
ದಿನಾಂಕಃ 24.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಂಜಿಎನ್ ವಕೀಲರಿಂದ

ದುರ್ಗಪ್ಪ ಮಾದರ ಆಸ್ತಿ ಸರ್ವೆ ನಂ.79 ಕ್ಷೇತ್ರ 14 ಎಕರೆ 14 ಗುಂಟೆಯ ಪೈಕಿ 7 ಎಕರೆ 7 ಗುಂಟೆಯನು ಖರೀದಿ ಪಡೆದ ನಂತರ 1965 ರಲ್ಲಿ ಪೋಟ ಹಿಸ್ಸಾ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಕುರಿತು ಡ ನಂ.653 ಮಂಜೂರು ಆಗಿರುತ್ತದೆ ಎಂದರೆ ಸರಿ. ನಂತರ ಸರ್ವೆ ನಂ.79/1 ಮತ್ತು 79/2 ಅಂತಾ 2 ಹಿಸ್ಸೆಗಳು ಆಗಿರುತ್ತವೆ ಎಂದರೆ ಸರಿ. ಮೂಲತಃ ಸರ್ವೆ ನಂ.79 ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸರಕಾರದವರು ಮಂಜೂರು ಮಾಡಿದ ಜಮೀನು ಎಂದರೆ ಸರಿಯಲ್ಲ. ಸದರಿ ಜಮೀನು ಸರಕಾರದಿಂದ ಪ್ರತಿವಾದಿಯರ ಪೂರ್ವಜರಿಗೆ ಮಂಜೂರು ಆಗಿದ್ದು ಅಂತಾ ಗೊತ್ತಿದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುರುವತ್ತೆಪ್ಪಗೌಡ ಬಸನಗೌಡ ಪಾಟೀಲ ನನ್ನ ಅಜ್ಜ. ಸರ್ವೆ ನಂ.79/1 ಕ್ಕೆ ಇವರ ಹೆಸರು ಸಾದಾಕುಳ ಅಂತಾ ದಾಖಲಾಗಿರುತ್ತದೆ ಎಂದರೆ ಸರಿ. ನಂತರ ದಿನಾಂಕಃ 20.08.1965 ನೇ ಇಸ್ವಿಯಲ್ಲಿ ಸದರಿ ಜಮೀನಿಗೆ ಸಾದಾಕುಳ ಅಂತಾ ಕುರುವತ್ತೆಪ್ಪಗೌಡ ಬಸನಗೌಡ ಪಾಟೀಲ ದಾಖಲಾದ ಹೆಸರು ರದ್ದಾಗಿರುತ್ತದೆ ಎಂದರೆ ಸರಿ. ಆ ಕುರಿತು ಡ ನಂ.1337 ಮಂಜೂರಾಗಿರುತ್ತದೆ ಎಂದರೆ ಸರಿ. ಈ ಹಿಂದೆ ನನ್ನ ಅಜ್ಜನ ಹೆಸರು ಸಾದಾಕುಳ ಅಂತಾ ದಾಖಲಾಗಿದ್ದನ್ನು ಪೋಕಳ ರೀತಿಯಲ್ಲಿ ಮುಂದುವರಿಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಪೋಕಳ ಅಂತಾ ದಾಖಲಾಗಿರುವ ಹೆಸರನ್ನು ಮುಂದುವರಿಸಿಕೊಂಡು ಬಂದು ಅದನ್ನು ದುರುಪಯೋಗಪಡಿಸಿಕೊಂಡು ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಅಂತಾ ಸುಳ್ಳು ಸಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ನಂ.53/1982 ನ್ನು ಗಂಗವ್ವ ತಾಯಿ ಮರಿಯವ್ವ ಇವಳು ನಮ್ಮ ವಿರುದ್ಧ ದಾವೆ ಹೂಡಿದ್ದಳು. ಅದರಲ್ಲಿ ದಾವಾ ಆಸ್ತಿ ಸರ್ವೆ ನಂ.79/1 ಬ ಇರುತ್ತದೆ. ಸರ್ವೆ ನಂ.79 ಅ ಕ್ಷೇತ್ರ 3 ಎಕರೆ 23 ಗುಂಟೆಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಆ ಪ್ರಕರಣದ ದಾವಾ ಆಸ್ತಿಗೂ ಈ ಪ್ರಕರಣದ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿ. ನಿಪಿ-19 ಹಕ್ಕು ಪತ್ರಿಕೆಯಲ್ಲಿರುವ ಆಸ್ತಿ ನಂಬರು ಮತ್ತು ದಾವಾ ಆಸ್ತಿ ಬೇರೆ ಬೇರೆ ಎಂದರೆ ಹಿಸ್ಸಾ ಮಾತ್ರ ಬೇರೆ ಬೇರೆ ಇರುತ್ತವೆ. ಸದರಿ ನಿಪಿ-19 ರಲ್ಲಿ ತೋರಿಸಿರುವ ಆಸ್ತಿ ಮತ್ತು ದಾವಾ ಆಸ್ತಿ ಬೇರೆ ಬೇರೆ ಆಸ್ತಿಗಳು ಎಂದರೆ ಸರಿ. ನಿಪಿ-20 ಸರ್ವೆ ನಂ.79/2 ರ

4 ಎಕರೆ 7 ಗುಂಟೆ ಪೈಕಿ 35 ಗುಂಟೆ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿ. ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಖರೀದಿಪತ್ರ ಆಗಲೀ ಅಥವಾ ಡ ಆಗಲೀ ಹಾಜರುಪಡಿಸಿಲ್ಲ ಎಂದರೆ ಸರಿ.

ದಾವಾ ಆಸ್ತಿ ಪ್ರತಿವಾದಿಯರ ಹಿರಿಯರಿಗೆ ಸರಕಾರದಿಂದ ಮಂಜೂರಾದ ಜಮೀನು ಇದ್ದರೂ ಸಹ ನಾವು ಅವರ ಮೇಲೆ ದುಟಾಯಿತನದಿಂದ ದೌರ್ಜನ್ಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಇವತ್ತಿನವರೆಗೂ ಪ್ರತಿವಾದಿಯರ ಕಬ್ಜೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯರ ಕಬ್ಜೆಯಲ್ಲಿದ್ದರೂ ಸಹ ನಮ್ಮ ಕಬ್ಜೆಯಲ್ಲಿರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಮೂಲ ಸರ್ವೆ ನಂ.79 ಜಮೀನು ಪರಿಶಿಷ್ಟ ಜಾತಿಯವರಿಗೆ ಸರಕಾರದಿಂದ ಮಂಜೂರಾದ ಜಮೀನು ಅಂತಾ ಕಂದಾಯ ನೀರಿಕ್ಷಕರು ಹತ್ತಿಮತ್ತೂರು ಇವರು ಉಪ ವಿಭಾಗಾಧಿಕಾರಿಗಳಿಗೆ ವರದಿ ಕೊಟ್ಟಿದ್ದರು ಎಂದರೆ ಸರಿಯಲ್ಲ. 2002 ರಲ್ಲಿ ಸವಣೂರಿನಲ್ಲಿ ಕುಡಿಯುವ ನೀರಿನ ಘಟನೆಗೆ ಸಂಬಂಧಿಸಿದಂತೆ ತಹಶೀಲ್ದಾರ ಕಚೇರಿಯನ್ನು ಸುಟ್ಟು ಧ್ವಂಸ ಮಾಡಿದ್ದರಿಂದ ಹಿಂದಿನ ದಾಖಲಾತಿಗಳು ದೊರೆಯುವುದಿಲ್ಲ ಅಂತಾ ಹಿಂಬರಹ ಕೊಡುತ್ತಾರೆ ಎಂದರೆ ಸರಿಯಲ್ಲ. ನಿಪಿ-8 ನ್ನು ನಾನು ತಹಶೀಲ್ದಾರ ಇವರಿಂದ ಸುಳ್ಳು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪಿ ಟಿ ಸಿ ಎಲ್ ಕಾಯ್ದೆ ಉಲ್ಲಂಘನೆಯಾಗಿದ್ದರಿಂದ ವಿಚಾರಣೆ ಆಗಿರುತ್ತದೆ ಎಂದರೆ ಅದು ವಜಾ ಆಗಿರುತ್ತದೆ. ಉಪ ವಿಭಾಗಾಧಿಕಾರಿಗಳು ತಮ್ಮ ಆದೇಶದಲ್ಲಿ ದಾವಾ ಆಸ್ತಿಯೂ ನಮಗೆ ಯಾವ ರೀತಿ ಬಂದಿರುತ್ತದೆ ಅಂತಾ ದಾಖಲಾತಿಗಳು ಇರುವುದಿಲ್ಲ ಅಂತಾ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಡ ನಂ.20 ಮತ್ತು 22 ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆ ಹೊರತುಪಡಿಸಿ ಬೇರೆ ದಾಖಲಾತಿಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬೇರೆ ದಾಖಲಾತಿಗಳು ಇರುವುದಿಲ್ಲ ಅಂತಾ ಗೊತ್ತಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಮಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿಹಾಕಬೇಕು ಅಂತಾ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.